## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಎಸ್.ಸಿ.136/2024

ಅಸಾ : 08
ಚಾಸಾ : 17

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ಮೆಣಸಕ್ಕನವರ |
| ತಂದೆಯ ಹೆಸರು | : | ಸಿದ್ದಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪೊಲೀಸ ಪೇದೆ-1249, ಡಿ.ಸಿ.ಆರ್.ಇ., ಹಾವೇರಿ |
| ವಾಸ ಸ್ಥಳ | : | ಹಾವೇರಿ. |

ದಿನಾಂಕ: **17/11/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಸಪ್ಟೆಂಬರ್-2020 ರಿಂದ 4 ವರೆ ವರ್ಷಗಳ ಕಾಲ ನಾನು ಹಾವೇರಿ ಶಹರ ಪೊಲೀಸ ಠಾಣೆಯ ಪೊಲೀಸ ಪೇದೆ ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕ:09/08/2024 ರಂದು ಚಾಸಾ-25 ರ ಆದೇಶದಂತೆ ಗುನ್ನೆ ಜಾಗೆ ಪಂಚನಾಮೆ ಕಾಲಕ್ಕೆ ನನ್ನ ಮೊಬೈಲ್ ಉಪಯೋಗಿಸಿ ಪೋಟೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿ ಹಾವೇರಿಯ ಒಂದು ಖಾಸಗಿ ಸೈಬರ ಸೆಂಟರನಲ್ಲಿ ಮೊಬೈಲ್ ನಲ್ಲಿರುವ ಸದರಿ ಡೇಟಾವನ್ನು ಪೆನಡ್ರೈವಗೆ ವರ್ಗಾಯಿಸಿ, ಅವುಗಳ ಅಚ್ಚು ಪಡೆದು ತಂದು ಚಾಸಾ-20 ರಿಗೆ ಸಲ್ಲಿಸಿ, ಪ್ರಮಾಣ ಪತ್ರ ನೀಡಿದ್ದೇನೆ. ನಾನು ನೀಡಿದ ಭಾ.ಸಾ.ಅ. ಕಲಂ.65(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ನಿಪಿ-14 ಮತ್ತು ನನ್ನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನಿಪಿ-9 ಮತ್ತು 10 ನಾನು ಸೆರೆಹಿಡಿದ ಪೋಟೋಗಳಿರುತ್ತವೆ.

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ಶ್ರೀ ಎನ್.ಜಿ.ಎಚ್. ವಕೀಲರಿಂದ:–**

3. ತನಿಖಾಧಿಕಾರಿ ಈ ಪ್ರಕರಣ ಕುರಿತು ನನ್ನನ್ನು ವಿಚಾರಿಸಿಲ್ಲ. ನಾನು ಗುನ್ನೆ ಜಾಗೆ ಪಂಚನಾಮೆ ಕಾಲಕ್ಕೆ ನನ್ನ ಮೊಬೈಲ್ ಉಪಯೋಗಿಸಿಲ್ಲ, ಪೋಟೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿಲ್ಲ, ಹಾವೇರಿಯ ಒಂದು ಖಾಸಗಿ ಸೈಬರ ಸೆಂಟರನಲ್ಲಿ ಮೊಬೈಲ್ ನಲ್ಲಿರುವ ಸದರಿ ಡೇಟಾವನ್ನು ಪೆನಡ್ರೈವಗೆ ವರ್ಗಾಯಿಸಿಲ್ಲ, ಅವುಗಳ ಅಚ್ಚು ಪಡೆದು ತಂದು ಚಾಸಾ-20 ರಿಗೆ ಸಲ್ಲಿಸಿಲ್ಲ ಎನ್ನುವುದು ಸುಳ್ಳು. ಉಪಯೋಗಿಸಿದ ಮೊಬೈಲ್ ಹೆಸರು ಪೋಟೋಗಳ ಮೇಲೆ ಬರುತ್ತದೆ ಎಂದರೆ ಸೆಟ್ಟಿಂಗ್ಸನ್ನು ಅವಲಂಬಿಸಿದೆ.

4. ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎನ್ನುವುದು ಸಳ್ಳು. ನಿಪಿ-9 ಮತ್ತು 10 ನಾನು ಸೆರೆಹಿಡಿದ ಪೋಟೋಗಳಲ್ಲ ಎನ್ನುವುದು ಸುಳ್ಳು.

**<u>ಪಾಟೀ ಸವಾಲು 3 ನೇ ಆರೋಪಿ ಪರ ಶ್ರೀ ಪಿ.ಬಿ.ಸಿ. ವಕೀಲರಿಂದಃ–</u>**

5. ಪಂಚನಾಮೆ ಕಾಲಕ್ಕೆ ಹಾಜರಿದ್ದು ವಿಡಿಯೋ ಮತ್ತು ಪೋಟೋ ಚಿತ್ರೀಕರಣ ಮಾಡುವಂತೆ ಚಾಸಾ-20 ನನಗೆ ಲಿಖಿತ ಆದೇಶ ನೀಡಿಲ್ಲ. ಯಾವ ಖಾಸಗಿ ಸೈಬರ್ ಸೆಂಟರ್ ನಲ್ಲಿ ಪೋಟೋ ಅಚ್ಚು ಪಡೆದಿದ್ದೇನೆ ಎನ್ನುವುದನ್ನು ನಿಪಿ-14 ರಲ್ಲಿ ನಮೂದು ಮಾಡಿಲ್ಲ. ನಾನು 10 ದಿನಗಳ ಕಾಲ ಕಂಪ್ಯೂಟರ ತರಬೇತಿ ಪಡೆದಿದ್ದೇನೆ. ಆ ಬಗ್ಗೆ ಪ್ರಮಾಣ ಪತ್ರ ನೀಡಲಾಗಿದೆ. ನಿಪಿ-9 ಮತ್ತು 10 ನಾನು ಪಡೆದ ಪೋಟೋಗಳಲ್ಲ ಎನ್ನುವುದು ಸುಳ್ಳು. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**<u>ಮರು ವಿಚಾರಣೆಃ</u>** ಇಲ್ಲ.

*(*ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.*)*
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.